10. Release of grants for completion of school building started under N. R. E. P.

SRI VEERAKUMAR PATIL (Nippani) —The Special Deputy Commissioner Belgaum District, had sanctioned two High School buildings at Examba and Stoonidhi, in Chikkodi Taluk under NREP. The work was started and part of the sanctioned amount was also released for this purpose. But unfortunately when the building work had reached roof level the work was stopped for want of grants Now the walls are affected by rains and may come down at any time. Hence I urge the Government to direct the Deputy Commissioner to release the remaining sanctioned amount and complete the bulidings immediately.

ಶ್ರೀ ಎಸ್. ಆರ್. ಬೊವ್ಮಾಯಿ.—ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮೇಲ್ಮನೆಯಲ್ಲಿದ್ದಾರೆ. ಈ ವಿಷಯವನ್ನು ಅವರ ಗಮನಕ್ಕೆ ತಂದು ಸೂಕ್ತ ಉತ್ತರ ಕೊಡುವಂತೆ ಹೇಳುತ್ತೇನೆ.

೧೧. ಸಂಕೇಶ್ವರ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸಂಕೇಶ್ವರ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಮಂಜೂರು ಮಾಡಿದ್ದು ಆದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹಣ ಮಂಜೂರು ಮಾಡಿದ್ದೇವೆಂದು ತಿಳಿಸಿರುತ್ತಾರೆ. ಈ ವರ್ಷ ಮಳೆ ಸರಿಯಾಗಿ ಬಾರದೆ ಇರುವುದರಿಂದ ಜನರು ನೀರಿನ ಬವಣೆಯನ್ನು ಅನುಭವಿಸುವುದರಲ್ಲಿ ಯಾವುದೇ ಅನುಮಾನ ಇಲ್ಲ. ಹಲವಾರು ವರ್ಷಗಳಿಂದ ಸಂಕೇಶ್ವರ ಪಟ್ಟಣಕ್ಕೆ ನೀರಿನ ತೊಂದರೆ ಇರುವುದರಿಂದ ಸರಕಾರದ ಗಮನವನ್ನು ಸೆಳೆದರೂ ಇಲ್ಲಿಯವರೆಗೆ ಈ ಯೋಜನೆ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಕಾರಣ ಮಾನ್ಯ ಮುಖ್ಯ ಮಂತ್ರಿಯವರು ಶಾಶ್ವತ ಸಂಕೇಶ್ವರ ನೀರಿನ ಯೋಜನೆಯ ಪ್ರಾರಂಭದ ಹಾಗೂ ಕಾರ್ಯಾಚರಣೆಯ ವಿಷಯವನ್ನು ಇಲಾಖೆಯಿಂದ ಪಡೆದುಕೊಂಡು ಶೀಘ್ರವಾಗಿ ಯೋಜನೆಯ ಪ್ರಾರಂಭಕ್ಕಾಗಿ ಸಂಕೇಶ್ವರ ಪಟ್ಟಣದ ಜನರ ಪರವಾಗಿ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿ, ಮಾನ್ಯ ಮಂಖ್ಯಿ ಮಂತ್ರಿಗಳಿಂದ ಹೇಳಿಕೆಯನ್ನು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

(ಶ್ರೀ ವೀರಣ್ಣನವರು ಮುಖ್ಯ ಮಂತ್ರಿಗಳ ಪರವಾಗಿ ಉತ್ತರವನ್ನು ಓದಲು ಪ್ರಾರಂಭಿಸಿದರು)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದನ್ನು ಮಾನ್ಯ ಮುಖ್ಯ ಮಂತ್ರಿಯವರೇ ಹೇಳಿದರೆ ಒಳ್ಳೆಯದು. ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಇದು ಬಹಳ ಗಂಭೀರವಾದ ವಿಷಯ. ಮಾನ್ಯ ಮಂಖ್ಯಿ ಮಂತ್ರಿಗಳೇ ಹೇಳಬೇಕು.

ಅಧ್ಯಕ್ಷರು.—ಇಲ್ಲಿ ಉತ್ತರ ಸಿದ್ಧವಾಗಿದೆ. ನಿಮಗೆ ಉತ್ತರ ಬಂದರೆ ಆಯಿತಲ್ಲ ? ಒಬ್ಬ ಮಂತ್ರಿಯವರ ಪರವಾಗಿ ಮತ್ತೊಬ್ಬ ಮಂತ್ರಿಯವರು ಹೇಳಬಹುದು.

ಶ್ರೀ ವೀರಣ್ಣ.—೧೯೮೧ನೇ ಜನಗಣತಿಯ ಪ್ರಕಾರ ಸಂಕೇಶ್ವರ ಪಟ್ಟಣದ ಜನಸಂಖ್ಯೆ ೨೪೦೧೬ ಇರುತ್ತದೆ. ಸಂಕೇಶ್ವರ ಪಟ್ಟಣಕ್ಕೆ ಹಾಲಿ ಇರುವ ನೀರು ಸರಬರಾಜಿನ ವ್ಯವಸ್ಥೆ ಹೀಗಿದೆ. ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಕಟ್ಟಿರುವ ಗೋಟೂರು ಹತ್ತಿರ ಬ್ಯಾರೇಜ್‌ನ ಮೆಲ್ಭಾಗದಲ್ಲಿ ಜಾಕ್‌ವೆಲ್ಲಿ ಕಟ್ಟಿ ಅಲ್ಲಿಂದ ನೀರನ್ನು ಪಂಪ್ ಮಾಡಿ ಪಟ್ಟಣಕ್ಕೆ ನೆಲಮಟ್ಟದ ಜಲಸಂಗ್ರಹಾಗಾರದಿಂದ ನೀರನ್ನು ಒದಗಿಸಲಾಗುತ್ತದೆ. ಐದು ಲಕ್ಷ ಗ್ಯಾಲನ್ ನೀರನ್ನು ಪಂಪು ಮಾಡಿ ಪಟ್ಟಣದ ಜನಸಂಖ್ಯೆಗೆ ತಲಾ ದಿನಂಪತ್ರಿ ೨೦ ಗ್ಯಾಲನ್‌ಗಳಂತೆ ನೀರು ಸರಬರಾಜು ಮಾಡಲಾಗುತ್ತದೆ. ಇದರ ನಿರ್ವಹಣೆ ಪುರಸಭೆಯ ವ್ಯಾಪ್ತಿಯಲ್ಲೇ ಬರುತ್ತದೆ. ಫೆಬ್ರುವರಿ ತಿಂಗಳಿಂದ ಗೋಟೂರು ಬ್ಯಾರೇಜ್‌ನಲ್ಲಿ ನೀರಿನ ಮಟ್ಟ

ಇಳವಣಿಖವಾಗಿ ಪಟ್ಟಣವು ಜೂನ್ ತಿಂಗಳವರೆಗೆ ನೀರಿನ ಅಭಾವವನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಜಲಸಯನ ಪ್ರದೇಶದಲ್ಲಿ ನೀರಾವರಿಗೋಸ್ಕರ ಪಂಪ್‌ಸೆಟ್‌ಗಳನ್ನು ಬಳಸಿ ಬ್ಯಾರೇಜಿನ ನೀರನ್ನು ಎತ್ತುವುದರಿಂದ, ನೀರು ಬಹಳ ತೀವ್ರವಾಗಿ ಬತ್ತಿಹೋಗುತ್ತದೆ. ಇದಕ್ಕೆ ಮಹಾರಾಷ್ಟ್ರ ಮತ್ತು ಕರ್ನಾಟಕದ ಎರಡು ಕಡೆಯ ರೈತರು ಕಾರಣರಾಗಿದ್ದಾರೆ.

ನೀರಿನ ಅಭಾವವನ್ನು ಸುಧಾರಿಸಲು ಶಾಶ್ವತ ಪರಿಹಾರಕ್ಕಾಗಿ ೧೯೮೧-೮೨ ರಲ್ಲಿ ೩೮೧ ಲಕ್ಷ ರೂಪಾಯಿಗಳಿಗೆ ಒಂದು ಯೋಜನೆಯನ್ನು ದ್ವಿಪಕ್ಷೀಯ ನೆರವಿಗಾಗಿ ತಯಾರಿ ಮಾಡಲಾಗಿದ್ದು. ಆದು ಕಾರಣಾಂತರಗಳಿಂದ ಕಾರ್ಯಗತವಾಗಲಿಲ್ಲ.

ಈಗ ಸಂಕೇಶ್ವರ ಪಟ್ಟಣಕ್ಕೆ ನೀರು ಒದಗಿಸಲು ಬದಲಿ ಯೋಜನೆಯನ್ನು ಯೋಜಿಸಲಾಗಿದೆ. ಈ ಯೋಜನೆಯ ರೂಪರೇಖೆಗಳು ಹೀಗಿವೆ. ೩–೫ ಕಿ. ಮಿ. ದೂರದಲ್ಲಿ ಹರಿಯುವ ಕರ್ಪೂರಿಹಳ್ಳಕ್ಕೆ ಒಂದು ಒಡ್ಡನ್ನು ಕಟ್ಟಿ ಫೆಬ್ರುವರಿಯಿಂದ ಮೇ ತಿಂಗಳಿನವರೆಗೆ (೪ ತಿಂಗಳಿಗೆ ಮಾತ್ರ) ಬೇಕಾಗುವ ನೀರನ್ನು ಶೇಖರಿಸಲು ಯೋಜಿಸಲಾಗಿದೆ.

೨೨೦ ಲಕ್ಷ ರೂಪಾಯಿಗಳಿಗೆ ಒಂದು ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ೩೧-೩-೮೬ ರಂದು ಮಂಜೂರಾತಿಗಾಗಿ ಕಳುಹಿಸಲಾಗಿದೆ. ಈ ಕೆಲಸವು ೧೯೮೫-೮೬ನೇ ಸಾಲಿನ ಮಂಡಳಿಯ ಕಾರ್ಯಕ್ರಮದಲ್ಲಿ ಸೇರಿಸಲಾಗಿದ್ದರೂ, ಯೋಜನೆಯನ್ನು ತಯಾರು ಮಾಡಲು ಸಿಬ್ಬಂದಿಗಳು ತನಿಖೆ ಮತ್ತು ಸಮೀಕ್ಷೆಗೆ ಹೋದಾಗ ಅಲ್ಲಿನ ಜನರು ತಕರಾರು ಮಾಡಿದ್ದರಿಂದ ಪೋಲೀಸ್ ಇಲಾಖೆಯವರ ಸಹಾಯ ತೆಗೆದುಕೊಂಡು ಸಮೀಕ್ಷೆಯನ್ನು ಪೂರೈಸಿ ಅಂದಾಜನ್ನು ತಯಾರು ಮಾಡಲು ಪೇಳೆ ಹಿಡಿಯಿತು.

ಮೊದಲು ನದಿ ಪಕ್ಕದಲ್ಲೇ ಇಂಪೌಂಡಿಂಗ್ ಜಲಾಶಯ ಮಾಡಲು ಉದ್ದೇಶಿಸಿದ್ದು, ಅಲ್ಲಿನ ಹರಿಜನ ಗಿರಿಜನ ಜಮೀನು ಇದ್ದುದರಿಂದ ಅವರು ಸಮೀಕ್ಷೆಯ ಕೆಲಸಕ್ಕೆ ಅಡಚಣೆ ಮಾಡಿದರು. ಆದ್ದರಿಂದ ಆ ಜಾಗವನ್ನು ಕೈಬಿಡಲಾಯಿತು. ಊರಿನಲ್ಲಿಯೇ ಬೇರೆ ಬೇರೆ ಜಾಗಗಳನ್ನು ನೋಡಿದಾಗ್ಯೂ ಅಲ್ಲಿಯೂ ಸಹ ಜನರ ನಿರಾಕರಣದಿಂದ ಆ ಸ್ಥಳವನ್ನು ಕೈಬಿಡಬೇಕಾಯಿತು. ಕೊನೆಗೆ ಊರಿನಿಂದ ೩–೪ ಕಿ. ಮಿ. ದೂರದಲ್ಲಿರುವ ಕರ್‌ಪೂರಿ ನಾಲಕ್ಕೆ ಅಡ್ಡಲಾಗಿ ಇಂಪೌಂಡಿಂಗ್ ಜಲಾಶಯ ಕಟ್ಟಲು ತೀರ್ಮಾನಿಸಲಾಯಿತು. ಆದ್ದರಿಂದ ಇದರ ಅಂದಾಜು ಮೊದಲು ಊಹಿಸಿದ ೧ ಕೋಟಿ ರೂಪಾಯಿಗಳಿಗಿಂತ ೨ ಕೋಟಿ ರೂಪಾಯಿಗಳಿಗೆ ಏರಿದೆ.

ಅಧೀಕ್ಷಕ ಅಭಿಯಂತರರು, ಧಾರವಾಡ ವೃತ್ತ, ಅವರು ತಮ್ಮ ೨೨–೫–೧೯೮೬ರ ಪತ್ರದಲ್ಲಿ ಮಾನ್ಯ ಕೇಂದ್ರ ಜಲಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು ೧೮–೫–೧೯೮೬ ರಂದು ಬೆಳಗಾವಿ ಪಟ್ಟಣಕ್ಕೆ ಪ್ರವಾಸ ಕೈಕೊಂಡ ಸಮಯದಲ್ಲಿ ಕರ್ಣಿಯಲ್ಲಿರುವ ಕೊಳವೆ ಬಾವಿಗಳಿಂದ ಸಂಕೇಶ್ವರ ಪಟ್ಟಣಕ್ಕೆ ನೀರನ್ನು ಒದಗಿಸುವ ಒಂದು ಯೋಜನೆಯನ್ನು ತಯಾರಿಸಬೇಕೆಂದು ಆಜ್ಞಾಪಿಸಿದರೆಂದು ತಿಳಿಸಿದ್ದಾರೆ. ಆದರಂತೆ ೫೦ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರಿಸಬೇಕೆಂದು ಆಜ್ಞಾಪಿಸಿದರೆಂದು ತಿಳಿಸಿದ್ದಾರೆ. ಆದರಂತೆ ೫೦ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರಕ್ಕೆ ಸಧ್ಯದಲ್ಲಿಯೇ ಕಳುಹಿಸಿ ಕೊಡಲಾಗುವುದು. ಪ್ರಸ್ತುತ ಇರುವ ಗಂಟೆಗೆ ಒಟ್ಟು ೧೦ ಸಾವಿರ ಗ್ಯಾಲನ್ ಇಳುವರಿ ಇರುವ ಕೊಳವೆ ಬಾವಿಗಳಲ್ಲದೆ ಇನ್ನೂ ೪ ಕೊಳವೆ ಬಾವಿಗಳನ್ನು ಕೊರೆದು, ೧೫ ಕಿ. ಮಿ. ಪೈಪ್ ಲೈನನ್ನು ಅಳವಡಿಸಿ ಸಂಕೇಶ್ವರ ಪಟ್ಟಣಕ್ಕೆ ನೀರನ್ನು ಒದಗಿಸುವ ಆಪೇಕ್ಷೆ ಈ ಯೋಜನೆಯಲ್ಲಿದೆ. ಗೋಟೂರು ಬ್ಯಾರೇಜ್‌ನಲ್ಲಿ ನೀರು ಇಳಿಮುಖವಾದಾಗ ಈ ಯೋಜನೆಯಿಂದ ನೀರನ್ನು ಒದಗಿಸಬಹುದು.

೧೯೮೨–೮೩ರ ಸಾಲಿನ ಅಭಾವ ಪರಿಹಾರ ಕಾಮಗಾರಿಯಲ್ಲಿ ಸಂಕೇಶ್ವರ ಪಟ್ಟಣಕ್ಕೆ ೫ ಕೊಳವೆ ಬಾವಿಗಳನ್ನು ತೋಡಲಾಗಿದ್ದು, ೨ ಫಲಪ್ರದವಾಗಿದ್ದು ಅವುಗಳಲ್ಲಿ ಒಂದಕ್ಕೆ ಕೈ ಪಂಪನ್ನು ಮತ್ತೊಂದಕ್ಕೆ ವಿದ್ಯುತ್ ಪಂಪನ್ನು ಅಳವಡಿಸಲಾಗಿದೆ.

೧೯೮೪-೮೫ರ ಅಭಾವ ಪರಿಹಾರ ಕಾಮಗಾರಿಯಲ್ಲಿ ಸಂಕೇಶ್ವರ ಪಟ್ಟಣಕ್ಕೆ ೩ ಕೊಳವೆ ಬಾವಿಗಳನ್ನು ತೋಡಲಾಗಿದ್ದು ೩ ಬಾವಿಗಳೂ ವಿಫಲವಾಗಿವೆ. ಇದೇ ಸಾಲಿನಲ್ಲಿ ಒಂದು ತೆರೆದ ಬಾವಿಯನ್ನು ತೋಡಲಾಗಿದ್ದು ಅದಕ್ಕೆ ವಿದ್ಯುತ್ ಯಂತ್ರವನ್ನು ಅಳವಡಿಸಲಾಗಿದೆ.

೧೯೮೫–೮೬ರ ಅಭಾವ ಪರಿಹಾರ ಕಾಮಗಾರಿಯಲ್ಲಿ ಸಂಕೇಶ್ವರ ಪಟ್ಟಣಕ್ಕೆ ೬ ಕೊಳವೆ ಬಾವಿಗಳನ್ನು ತೋಡಲಾಗಿದ್ದು ಇವುಗಳಲ್ಲಿ ಫಲಪ್ರದವಾದ ೨ ಕೊಳವೆ ಬಾವಿಗಳಿಗೆ ಕೈ ಪಂಪನ್ನು ಅಳವಡಿಸಲಾಗಿದೆ, ಮತ್ತು ೧೯೮೬-೮೭ರ ಅಭಾವ ಪರಿಹಾರ ಕಾಮಗಾರಿಯಲ್ಲಿ ಹೆಚ್ಚು ಇಳುವರಿ ಇರುವ ಒಂದು ಕೊಳವೆ ಬಾವಿಗೆ ವಿದ್ಯುತ್ ಯಂತ್ರವನ್ನು ಅಳವಡಿಸಲಾಗಿದೆ.